ಪ್ರಜಾಸೇವಾ ಕಾರ್ಯಕ್ರಮಗಳ ಮೂಲಕ ಜಿಲ್ಲಾಡ ಳಿತದ ಎಲ್ಲ ಇಲಾಖೆಗಳ ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನಕ್ಕೆ ಕರೆತಂದು, ಜನರ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುತ್ತಿದೆ.

● **ಸಂತೋಷ ಲಾಡ್** ಸಚಿವ

ಕನ್ನಡಪ್ರಭ
ಮಂಗಳವಾರ 3.11.2026
ಹುಬ್ಬಳ್ಳಿ

ಸುದ್ದಿ ಸಿಂಚನ

ಕವಿತೆ ಕಟ್ಟುವ ಕಲೆ ಜೀವನ ಕಟ್ಟಬಲ್ಲದು

ಹುಬ್ಬಳ್ಳಿ: ಮಕ್ಕಳಿಗೆ ಸೃಜನಾತ್ಮಕತೆ ಬೆಳೆಸುವಲ್ಲಿ ಕವಿತೆಯ ಪಾತ್ರ ಮುಖ್ಯವಾಗಿದೆ. ಕವಿತೆ ಕಟ್ಟುವ ಕಲೆ ಜೀವನ ಕಟ್ಟಬಲ್ಲದು. ಕವಿತೆ ಕಟ್ಟುವ ಸಂಸ್ಕಾರವನ್ನು ಶಾಲೆಗಳಲ್ಲಿ ಧಾರೆಯೆರೆಯಬೇಕು ಎಂದು ಯುವ ಕವಿ ರಂಜಾನ್ ಕಿಲ್ಲೇದಾರ ಅಭಿಪ್ರಾಯಪಟ್ಟರು. ಅವರು ತಾಲೂಕಿನ ಕಿರೇಸೂರ ಸರ್ಕಾರಿ ಪ್ರೌಢಶಾಲೆಯ ಅರಳಿಕಟ್ಟೆ ತೆರೆದ ವಾಚನಾಲಯದಲ್ಲಿ ಶಾಲಾ ಶಿಕ್ಷಣ ಇಲಾಖೆಯಿಡಿ ನಡೆದ ಮೊದಲ ಸಮುದಾಯದತ್ತ ಕಾರ್ಯಕ್ರಮದಲ್ಲಿ ಮಾರ್ಗದರ್ಶಕರಾಗಿ ಆಗಮಿಸಿ ಮಾತನಾಡಿದರು. ಬಾಲಕವಿಗಳಾದ ಸುಪ್ರಿತಾ ಈಟಿ, ಶಂಕ್ರವ್ವ ಚನ್ನಪ್ಪಗೌಡ್ರ, ಕಾವೇರಿ ನಾಗನೂರ, ಶ್ವೇತಾ ಮಲ್ಲೂರ, ಸಹನಾ ಮೇಟಿ, ವೈಷ್ಣವಿ ಸಾವಕ್ಕನವರ, ಕಾವ್ಯ ಬೂದಣ್ಣವರ, ವರುಣ ಬಡಿಗೇರ, ಯಶೋಧಾ ಧರೆಪ್ಪನವರ, ಐಶ್ವರ್ಯ ಗುಡಿಸಲಮನಿ, ನಿವೇದಿತಾ ಹಿರೇಮಠ, ದಾನೇಶ್ವರಿ ಬಳಗಲಿ, ಪ್ರೀತಂ ರೇವಣ್ಣವರ ತಮ್ಮ ಸ್ವರಚಿತ ಕವಿತೆಗಳನ್ನು ವಾಚಿಸಿದರು. ಮುಖ್ಯಶಿಕ್ಷಕಿ ಸುಮನ ತೇಲಂಗ ಅಧ್ಯಕ್ಷತೆ ವಹಿಸಿದ್ದರು. ಅರಳೀಕಟ್ಟೆ ಸಂಚಾಲಕ ಡಾ. ಲಿಂಗರಾಜ ರಾಮಾಪೂರ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕಿ ಜಯಶ್ರೀ ಎಂ, ಸುಲೋಚನಾ ಬೆಳಗಾವಿ, ಮಂಗಳಾ ಕಮ್ಮಾರ ಸೇರಿದಂತೆ ಹಲವರಿದ್ದರು. ಕೀರ್ತಿ ಚಾಕಲಬ್ಬಿ ನಿರೂಪಿಸಿದರು.

ಸಿರಿಗನ್ನಡ ಸಂಭ್ರಮ ಕಾರ್ಯಕ್ರಮ

ಹುಬ್ಬಳ್ಳಿ: ಕನ್ನಡ ರಾಜ್ಯೋತ್ಸವದ ಅಂಗವಾಗಿ ಕೇಶ್ವಾಪುರದ ಆಕ್ಸ್‌ಫರ್ಡ್ ಕಾಲೇಜಿನಲ್ಲಿ ಸಿರಿಗನ್ನಡ ಸಂಭ್ರಮ ಕಾರ್ಯಕ್ರಮ ಜರುಗಿತು. ಅತಿಥಿಗಳಾಗಿ ಆಗಮಿಸಿದ್ದ ಸಾಹಿತಿ ನವೀದ್ ಮುಲ್ಲಾ ಮಾತನಾಡಿ, ಕನ್ನಡ ಭಾಷೆಯ ಶೌರ್ಯ, ಪರಾಕ್ರಮ, ಶ್ರೀಮಂತ ಸಂಸ್ಕೃತಿ ಹಾಗೂ ಕನ್ನಡದ ಮಹಾನ್ ಕವಿಗಳ ಸಾಹಿತ್ಯಿಕ ಕೊಡುಗೆಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಪ್ರಾಂಶುಪಾಲ ಮಂಜುನಾಥ್ ಮುತ್ತಲಗಿರಿ ಮಾತನಾಡಿ, ಹೊರರಾಜ್ಯಗಳಿಂದ ಬರುವವರಿಗೂ ಕನ್ನಡವನ್ನು ಕಲಿಸುವ ಮೂಲಕ ಭಾಷೆಯ ಬಳಕೆ ಮತ್ತು ಬೆಳವಣಿಗೆಗೆ ಎಲ್ಲರೂ ಸಹಕರಿಸಬೇಕು ಎಂದು ಕರೆ ನೀಡಿದರು. ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗೆ ಚರ್ಚಾಸ್ಪರ್ಧೆ, ಭಾಷಣ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿತ್ತು. ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಉಪಪ್ರಾಂಶುಪಾಲ ಡಾ. ಅಲಿಸ್ಟಿನ್ ವಿಕ್ಟರ್‌ಹಾಗೂ ಪದವಿ ಪೂರ್ವ ವಿಭಾಗದ ಪ್ರಾಂಶುಪಾಲ ದೀಪಕ್ ಡೋಂಗ್ರೆ, ಕನ್ನಡ ಉಪನ್ಯಾಸಕ ಶ್ರೀಧರ್‌ಭಟ್ ಸೇರಿದಂತೆ ಹಲವರಿದ್ದರು.



ನವಲಗುಂದ ಸಾರಿಗೆ ಘಟಕದಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಯಿತು. ಘಟಕ ವ್ಯವಸ್ಥಾಪಕ ಪ್ರಸಾದ ಜೆ.ಟಿ, ವಿ.ಡಿ. ಅಂದಾನಗೌಡ್ರ, ವೀರೇಶ ಕುರಿ, ಮಾಬುಸಾಬ್ ದಿವಾನಖಾನವರ, ಎಂ.ಆರ್. ಹೆಬಸೂರ, ರಾಜು ಮಾಲಗತ್ತಿ ಸೇರಿ ಹಲವರಿದ್ದರು.



ಕನ್ನಡ ರಾಜ್ಯೋತ್ಸವದ ಅಂಗವಾಗಿ ಹುಬ್ಬಳ್ಳಿ ಕೇಶ್ವಾಪುರದ ಆಕ್ಸ್‌ಫರ್ಡ್ ಕಾಲೇಜಿನಲ್ಲಿ ಸಿರಿಗನ್ನಡ ಸಂಭ್ರಮ ಕಾರ್ಯಕ್ರಮ ಆಚರಿಸಲಾಯಿತು. ಸಾಹಿತಿ ನವೀದ್ ಮುಲ್ಲಾ, ಉಪಪ್ರಾಂಶುಪಾಲ ಡಾ. ಅಲಿಸ್ಟಿನ್ ವಿಕ್ಟರ್‌ಹಾಗೂ ಪ್ರಾಂಶುಪಾಲ ದೀಪಕ್ ಡೋಂಗ್ರೆ ಇದ್ದರು.



ಹುಬ್ಬಳ್ಳಿ ತಾಲೂಕಿನ ಕಿರೇಸೂರ ಸರ್ಕಾರಿ ಪ್ರೌಢಶಾಲೆಯ ಅರಳಿಕಟ್ಟೆ ತೆರೆದ ವಾಚನಾಲಯದಲ್ಲಿ ನಡೆದ ಮೊದಲ ಸಮುದಾಯದತ್ತ ಕಾರ್ಯಕ್ರಮದಲ್ಲಿ ಯುವ ಕವಿ ರಂಜಾನ್ ಕಿಲ್ಲೇದಾರ ಮಾತನಾಡಿದರು.

ನೀರು ಮಾರಾಟ ಖಂಡಿಸಿ 21 ವರ್ಷದಿಂದ ಮೌನವ್ರತ

2005ರಿಂದ ಮೌನವಾಗಿ ಹೋರಾಡುತ್ತಿರುವ ಅಂಬ್ರೋಸ್ | ಬರಿಗಾಲಿನಲ್ಲೇ ದೇಶ ಸುತ್ತುವ ವ್ಯಕ್ತಿ | ಲಕ್ಷ ಕಿಮೀಗೂ ಅಧಿಕ ಕಾಲ್ನಡಿಗೆಯ ಪಯಣ

● **ಅಜೀಜಅಹ್ಮದ ಬಳಗಾನೂರ**
ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ

ಪ್ರಕೃತಿ ಉಚಿತವಾಗಿ ನೀಡುವ ನೀರಿಗೂ ಬೆಲೆ ಕಟ್ಟಿದ ಜಗತ್ತಿನ ವಿರುದ್ಧ 'ಅಂಬ್ರೋಸ್ ಅಲಿಯಾಸ್ ಅಮೃತ್' ಅವರ ಪ್ರತಿಭಟನೆಗೆ ಮಾತುಗಳೇ ಬೇಕಿಲ್ಲ. ನೀರು ಎಲ್ಲರಿಗೂ ಉಚಿತವಾಗಿ ಸಿಗಬೇಕು ಎಂಬ ಬೇಡಿಕೆಯೊಂದಿಗೆ 2005ರಿಂದ ಮೌನವ್ರತ ಕೈಗೊಂಡಿರುವ ಅವರು, ಬರಿಗಾಲಿನಲ್ಲೇ ದೇಶ ಸುತ್ತುತ್ತಾ ಜನಜಾಗೃತಿ ಮೂಡಿಸುತ್ತಿದ್ದಾರೆ.


ಉನ್ನತ ಶಿಕ್ಷಣ, ಸಂಶೋಧನೆ, ಸ್ವಂತ ಮನೆ ಕಟ್ಟುವ ಕನಸುಗಳನ್ನೆಲ್ಲ ಬದಿಗಿಟ್ಟು ಅಸಹಾಯಕರ ಸೇವೆಗೆ ಬದುಕು ಮುಡಿಪಾಗಿಟ್ಟಿರುವ ಅಮೃತ್ ಅವರ ಪಾಲಿಗೆ ಮೌನವೇ ಅಸ್ತ್ರವನ್ನಾಗಿಸಿಕೊಂಡು ಮುನ್ನಡೆಯುತ್ತಿದ್ದಾರೆ.

ಬಾಯಾರಿದ ಕಾರ್ಮಿಕರು: ಬೆಂಗಳೂರಿನಲ್ಲಿ ಕಟ್ಟಡ ಕಾರ್ಮಿಕರು ಕುಡಿಯುವ ನೀರಿಗಾಗಿ ಪರದಾಡುತ್ತಿದ್ದ ದೃಶ್ಯ ಅಮೃತ ಅವರ ಬದುಕಿಗೆ ಹೊಸ ತಿರುವು ನೀಡಿತು. ನೀರು ಕೇಳಿದ ಕಾರ್ಮಿಕರಿಗೆ ಬಾಟಲಿ ನೀರು ಖರೀದಿಸಿ ಕುಡಿಯುವಂತೆ ಕೆಲವರು ಸೂಚಿಸಿದ್ದರು. ಬಡವರು ಕುಡಿಯುವ ನೀರಿಗೂ ಹಣ ನೀಡಬೇಕಾದ ಪರಿಸ್ಥಿತಿ ಅವರನ್ನು ಕಾಡಿತು. ಪ್ರಕೃತಿ ನೀಡುವ ಜೀವಜಲ ವ್ಯಾಪಾರದ ಸರಕಾಗಬಾರದು ಎಂದು ನಿರ್ಧರಿಸಿದ ಅವರು, ಎಲ್ಲರಿಗೂ ಉಚಿತವಾಗಿ ನೀರು ಸಿಗುವ ವರೆಗೂ ಮಾತನಾಡುವುದಿಲ್ಲ ಎಂಬ ಸಂಕಲ್ಪ ತೊಟ್ಟರು. ಅಂದಿನಿಂದ ಮೌನವೇ ಅವರ ಪ್ರತಿಭಟನೆಯ ಭಾಷೆಯಾಯಿತು.

ಜನಸೇವೆಯತ್ತ ಡಾಕ್ಟರ್: ಬೆಂಗಳೂರು ವಿವಿಯಲ್ಲಿ ಎಂಎ ಪದವಿ ಪಡೆದ ಅಮೃತ್, ಯುಜಿಸಿ ಪರೀಕ್ಷೆಯನ್ನೂ ಪೂರ್ಣಗೊಳಿಸಿದ್ದರು. ಮುಂದೆ ಪಿಎಚ್.ಡಿ ಸಂಶೋಧನೆ ನಡೆಸುವ ಕನಸು ಕಂಡಿದ್ದರು. ಆದರೆ, ರೈತ ಚಳವಳಿಗಳ ಸಂಪರ್ಕ ಅವರ ಬದುಕಿನ ದಿಕ್ಕನ್ನೇ ಬದಲಿಸಿತು. ಕರ್ನಾಟಕ ರಾಜ್ಯ ರೈತ ಸಂಘದ ಪ್ರೊ. ನಂಜುಂಡಸ್ವಾಮಿ ಅವರ ಸಂಪರ್ಕಕ್ಕೆ ಬಂದ ಬಳಿಕ ರೈತರ ಹೋರಾಟಗಳಲ್ಲಿ ಸಕ್ರಿಯರಾದರು. ರೈತ ಮುಖಂಡ ಶೇಷಾರೆಡ್ಡಿ ಅವರು ಅಂಬ್ರೋಸ್‌ಗೆ 'ಅಮೃತ್' ಎಂದು ಹೆಸರಿಟ್ಟರು. ಮುಂದೆ ಅದೇ ಅವರ ಹೋರಾಟದ ಗುರುತಾಯಿತು.

ರಟ್ಟಿನ ಪೆಟ್ಟಿಗೆಗಳೇ ಹಾಸಿಗೆ: ಮೂಲತಃ ಬೆಂಗಳೂರಿನವರಾದ ಅಮೃತ್ ಅನಾಥರು. ಇವರಿಗೆ ಮನೆಯಿಲ್ಲ. ಅಲೆಮಾರಿ ಬುಡಕಟ್ಟು ಮಹಾಸಭೆಯ ಕಚೇರಿಯೇ ಇವರಿಗೆ ವಾಸಸ್ಥಳ, ರಟ್ಟಿನ ಪೆಟ್ಟಿಗೆಗಳೇ ಅವರ ಹಾಸಿಗೆಯಾಗಿತ್ತು. ದಿನಕ್ಕೆ ಒಂದೇ ಹೊತ್ತು ಊಟ ಮಾಡುವ ಇವರು ಅಹಿಂಸೆ, ಜಾತ್ಯತೀತತೆ ಮತ್ತು ಏಕತೆಯ ಸಂದೇಶ ಸಾರುವ ಪುಸ್ತಕಗಳನ್ನು ಮಾರಾಟ ಮಾಡಿ ಬರುವ ಹಣದಲ್ಲಿ ಬಡವರಿಗೆ ನೆರವಾಗುತ್ತಾರೆ. ಪುಸ್ತಕ ಖರೀದಿಸಲು ಸಾಧ್ಯವಾಗದವರಿಗೆ ಉಚಿತವಾಗಿ ನೀಡುತ್ತಾರೆ. ನೀರಿನ ಹಕ್ಕಿನ ಜತೆಗೆ ರೈತರ ಸಮಸ್ಯೆ, ಎಸ್‌ಐಆರ್, ಸಾಮಾಜಿಕ ಸಮಾನತೆ ಮತ್ತು ಕನ್ನಡ ಭಾಷೆಯ ಉಳಿವಿನ ಬಗ್ಗೆಯೂ ಅಮೃತ ಕಾಳಜಿ ಹೊಂದಿದ್ದಾರೆ. ಮತದಾನ ದಾನವಲ್ಲ, ನಾಗರಿಕರ ಹಕ್ಕು ಎಂದು ಪ್ರತಿಪಾದಿಸಿರುವ ಅವರು, ಬಡ ರೋಗಿಗಳಿಗೆ ನೆರವಾಗುವುದು, ಅಸಹಾಯಕರಿಗೆ ಸಹಾಯದಂತಹ ಸೇವಾ ಕಾರ್ಯಗಳಲ್ಲೂ ತೊಡಗಿಸಿಕೊಂಡಿದ್ದಾರೆ.

ಮಾನವೀಯ ಧ್ವನಿ: ಅಮೃತ್ ಅವರ ಬದುಕಿನಲ್ಲಿ ಐಷಾರಾಮಿಗೆ ಜಾಗವಿಲ್ಲ. ಆದರೆ, ಸಮಾಜದ ಬಗ್ಗೆ ಅಪಾರ ಕಾಳಜಿಯಿದೆ. ತುಟಿಗಳ ಮೇಲೆ ಮಾತಿಲ್ಲ, ಕಾಲಿನ ಕೆಳಗೆ ಚಪ್ಪಲಿಯಿಲ್ಲ. ಆದರೂ ಅವರ ಬದುಕು ಸಮಾಜದ ಮುಂದೆ ಹಲವು ಪ್ರಶ್ನೆಗಳನ್ನು ಇಡುತ್ತದೆ. ನೀರು ಲಾಭದ ಸರಕಲ್ಲ, ಪ್ರತಿಯೊಬ್ಬರ ಬದುಕಿನ ಹಕ್ಕು ಎಂಬ ಅವರ ಸಂದೇಶಕ್ಕೆ ಧ್ವನಿಯ ಅಗತ್ಯವಿಲ್ಲ. ಅವರ ಮೌನವೇ ವ್ಯವಸ್ಥೆಯನ್ನು ಪ್ರಶ್ನಿಸುವ ಪ್ರತಿಭಟನೆ ಅಚ್ಚರಿಯನ್ನುಂಟು ಮಾಡಿದೆ.



ನೀರಿನ ಮಾರಾಟ ವಿರೋಧಿಸಿ 21 ವರ್ಷಗಳಿಂದ ಮಾತು ತ್ಯಜಿಸಿ ಹೋರಾಡುತ್ತಿರುವ ಅಂಬ್ರೋಸ್ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಪ್ರತಿಭಟನೆಯೊಂದರಲ್ಲಿ ಪಾಲ್ಗೊಂಡಿದ್ದರು.

ಲಕ್ಷ ಕಿಮೀ ಪಯಣ

ಹರಿಯಾಣದಲ್ಲಿ ದಲಿತರ ಹತ್ಯೆಯ ಘಟನೆ ಮನಸ್ಸನ್ನು ಕಲಕಿದ ಬಳಿಕ ಚಪ್ಪಲಿ ಧರಿಸುವುದನ್ನೂ ತ್ಯಜಿಸಿದ ಅಮೃತ್, ಇಂದಿಗೂ ಬರಿಗಾಲಿನಲ್ಲೇ ಸಂಚರಿಸುತ್ತಿದ್ದಾರೆ. ಅಕ್ರಮ ಗಣಿಗಾರಿಕೆ ವಿರುದ್ಧ ಬೆಂಗಳೂರಿನಿಂದ ಬಳ್ಳಾರಿ ವರೆಗೆ ನಡೆದ ಪಾದಯಾತ್ರೆಯಲ್ಲೂ ಪಾಲ್ಗೊಂಡಿದ್ದರು. ದೇಶದ ಬಹುತೇಕ ರಾಜ್ಯಗಳಲ್ಲಿ ಕಾಲ್ನಡಿಗೆಯ ಮೂಲಕ ಒಂದು ಲಕ್ಷ ಕಿ.ಮೀ.ಗೂ ಅಧಿಕ ದೂರ ಕ್ರಮಿಸಿರುವುದಾಗಿ ತಿಳಿಸುತ್ತಾರೆ. ಇತ್ತೀಚೆಗೆ ಹುಬ್ಬಳ್ಳಿಗೆ ಆಗಮಿಸಿದ ಅವರು, ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು.

- ಬೆಂಗಳೂರಿನಲ್ಲಿ ಕಟ್ಟಡ ಕಾರ್ಮಿಕರು ಕುಡಿಯುವ ನೀರಿಗಾಗಿ ಪರದಾಡುತ್ತಿದ್ದ ದೃಶ್ಯ ಅಮೃತ ಅವರ ಬದುಕಿಗೆ ತಿರುವು ನೀಡಿತು.
- ನೀರು ಕೇಳಿದ ಕಾರ್ಮಿಕರಿಗೆ ಬಾಟಲಿ ನೀರು ಖರೀದಿಸಿ ಕುಡಿಯುವಂತೆ ಕೆಲವರು ಸೂಚಿಸಿದ್ದರು. ಬಡವರು ಕುಡಿಯುವ ನೀರಿಗೂ ಹಣ ನೀಡಬೇಕಾದ ಪರಿಸ್ಥಿತಿ ಅವರನ್ನು ಕಾಡಿತು.
- ಅಮೃತ್ ಅವರ ಬದುಕಿನಲ್ಲಿ ಐಷಾರಾಮಿಗೆ ಜಾಗವಿಲ್ಲ. ಆದರೆ, ಸಮಾಜದ ಬಗ್ಗೆ ಅಪಾರ ಕಾಳಜಿಯಿದೆ. ತುಟಿಗಳ ಮೇಲೆ ಮಾತಿಲ್ಲ, ಕಾಲಿನ ಕೆಳಗೆ ಚಪ್ಪಲಿಯಿಲ್ಲ. ಆದರೂ ಅವರ ಬದುಕು ಸಮಾಜದ ಮುಂದೆ ಹಲವು ಪ್ರಶ್ನೆಗಳನ್ನು ಇಡುತ್ತದೆ.
- ಇವರಿಗೆ ಮನೆಯಿಲ್ಲ. ಅಲೆಮಾರಿ ಬುಡಕಟ್ಟು ಮಹಾಸಭೆಯ ಕಚೇರಿಯೇ ಇವರಿಗೆ ವಾಸಸ್ಥಳ, ರಟ್ಟಿನ ಪೆಟ್ಟಿಗೆಗಳೇ ಅವರ ಹಾಸಿಗೆಯಾಗಿತ್ತು.
- ಬಡ ರೋಗಿಗಳಿಗೆ ನೆರವಾಗುವುದು, ಅಸಹಾಯಕರಿಗೆ ಸಹಾಯದಂತಹ ಸೇವಾ ಕಾರ್ಯದಲ್ಲಿ ಭಾಗಿ

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ. 28 UBL 2026-27, ದಿನಾಂಕ: 29.10.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕ್ರಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಬನ್ನಿಹಟ್ಟಿ – ರಂಜೀತಪುರ (ಬಿಎನ್‌ಹೆಚ್‌ಟಿ–ಆರ್‌ಎನ್‌ಜೆಪಿ): ಟ್ರೆಫ್ ರೀಇನ್‌ಫೋರ್ಸ್‌ಮೆಂಟ್ ಮ್ಯಾಟ್ ಮತ್ತು ಬೌಲ್ಡರ್ ನೆಟ್ಟಿಂಗ್ ಮೂಲಕ ದುರ್ಬಲವಾದ ಕಟಿಂಗ್ ಇಳಿಜಾರುಗಳಿಂದ ಬೌಲ್ಡರ್‌ಗಳು ಕೆಳಗೆ ಬೀಳುವುದರಿಂದ ಮತ್ತು ಮಣ್ಣಿನ ಸವೆತದಿಂದ ರಕ್ಷಿಸುವುದು.	ರೂ. 6,41,52,136.00
2	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ – ಗದಗ (ಯುಬಿಎಲ್–ಜಿಡಿಜಿ) ವಿಭಾಗ: ಅಣ್ಣಿಗೇರಿ– ಹುಲಕೋಟಿ (ಎನ್‌ಜಿಆರ್–ಎಲ್‌ಕೆಟಿ) ನಿಲ್ದಾಣಗಳ ನಡುವೆ ಆರ್‌ಹೆಚ್ ಗಿರ್ಡರ್/ಕಟ್ ಮತ್ತು ಕವರ್ ಮಾದರಿಯಲ್ಲಿ ಪ್ರೀಕಾಸ್ಟ್ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ಗಳಿಂದ ಬ್ರಿಡ್ಜ್ ನಂ. 14 (ಡೌನ್ ಲೈನ್) ನ ಮರುನಿರ್ಮಾಣ.	ರೂ. 55,05,180.00
3	ಹುಬ್ಬಳ್ಳಿ ವಿಭಾಗ: 05 ನಿಲ್ದಾಣಗಳಲ್ಲಿ ಪ್ರಸ್ತಾವಿತ ಟ್ರ್ಯಾಕ್ ಮಶೀನ್ ಸೈಡಿಂಗ್‌ಗಳ ನಿರ್ಮಾಣ. ಹರ್ಲಾಪುರ (ಆರ್‌ಎಲ್‌ಪಿ), ತಲಕಲ್ (ಟಿಎಲ್‌ಕೆಎಲ್), ರಂಜೀತಪುರ (ಆರ್‌ಎನ್‌ಜೆಪಿ), ಯಶವಂತನಗರ (ವೈಟಿಜಿ) ಮತ್ತು ರಾಯದುರ್ಗ (ಆರ್‌ಡಿಜಿ).	ರೂ. 2,72,83,434.00
4	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ – ಬಳ್ಳಾರಿ (ಯುಬಿಎಲ್–ಬಿಎವೈ) ವಿಭಾಗ: ಹೊಸಪೇಟೆ – ಕುಡಾತಿನಿ ವಿಭಾಗದ ನಡುವೆ ಆರ್‌ಯುಬಿ ನಂ. 198ಎ ನಲ್ಲಿ ಚರಂಡಿ, ಸ್ಪೀಡ್ ಹಂಪ್‌ಗಳು, ಕ್ಯಾಚ್ ವಾಟರ್ ಡ್ರೈನ್ ಮುಂತಾದವುಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು.	ರೂ. 1,96,99,796.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.11.2026, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಅಭಿಯಂತರರು/ಸಂಯೋಜನೆ/ಹುಬ್ಬಳ್ಳಿ
PUB/583/AAD/PRB/SWR/2026-27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ-ಟೆಂಡರು ಸೂಚನೆ ಸಂ.: HE-TRD-2025-26-OT-41-2 ದಿನಾಂಕ: 28.10.2026


ಕಾಮಗಾರಿಯ ವಿವರ	ಅಂದಾಜು ಮೌಲ್ಯ
ವಾಸ್ಕೋ–ಡ–ಗಾಮಾ (ವಿಎಸ್‌ಜಿ) ಕೊನೆಯಲ್ಲಿ ಕ್ಯಾಸಲ್ ರಾಕ್ (ಸಿಎಲ್‌ಆರ್) ಯಾರ್ಡ್‌ನಲ್ಲಿ ಶಾರ್ಟ್ ಶಂಟಿಂಗ್ ನೆಕ್‌ನ ವ್ಯವಸ್ಥೆಗಾಗಿ ಓಹೆಚ್‌ಇ ಮೇಲಿನ ಮಾರ್ಪಾಡು.	ರೂ. 57,82,969.30

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.11.2026, 15:00 ಗಂಟೆಯವರೆಗೆ

ಇ-ಟೆಂಡರು ಸೂಚನೆ ಸಂ.: HE-TRD-2025-26-OT-27-4 ದಿನಾಂಕ: 28.10.2026


ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಗಿಣಿಗೇರ (ಜಿಐಎನ್) ನಿಲ್ದಾಣದಲ್ಲಿ 1 ಹೆಚ್ಚುವರಿ ಲೂಪ್ ಲೈನಿನ ವ್ಯವಸ್ಥೆಗಾಗಿ ಓಹೆಚ್‌ಇ ಮಾರ್ಪಾಡು.	ರೂ. 1,18,39,957.40


ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.11.2026, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ವಿದ್ಯುತ್ ಅಭಿಯಂತರರು / ಟ್ರ್ಯಾಕ್ಷನ್ ವಿನಿಯೋಗ / ಹುಬ್ಬಳ್ಳಿ
PUB/578/AAMO/PRB/SWR/2026-27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRAILWAYHQ | sw_railways



ಆರು ಜನರ ಬಂಧನ

ಹುಬ್ಬಳ್ಳಿ: ಧಾರವಾಡದ ಟೋಲ್‌ನಾಕಾ ಹಾಗೂ ಹಳೇಹುಬ್ಬಳ್ಳಿಯ ಗುಡಿಹಾಳ ರಸ್ತೆ ಬಳಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಪಡೆದ ಸಿಸಿಬಿ ಹಾಗೂ ಹಳೇಹುಬ್ಬಳ್ಳಿ ಠಾಣೆ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿ ಆರು ಆರೋಪಿಗಳನ್ನು ಬಂಧಿಸಿದ್ದಾರೆ. ₹15, 360 ಮೌಲ್ಯದ 175 ಗ್ರಾಂ ಗಾಂಜಾ, 2 ಮೊಬೈಲ್ ಹಾಗೂ ₹3,010 ನಗದು, ಹುಬ್ಬಳ್ಳಿಯಲ್ಲಿ ₹15, 800 ಮೌಲ್ಯದ 316 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ. ಪ್ರಕರಣದ ಮತ್ತೊಬ್ಬ ಆರೋಪಿ ಅರ್ಮಾನ ಪರಾರಿಯಾಗಿದ್ದಾನೆ.





15000 ಕುಟುಂಬಕ್ಕೆ ನಿವೇಶನ ನೀಡಿ

ನಿವೇಶನ ರಹಿತರ ಆಂದೋಲನ ಹು-ಧಾ ಸಂಘಟನೆ ವತಿಯಿಂದ ಮೌನ ಪ್ರತಿಭಟನೆ

● **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಹುಬ್ಬಳ್ಳಿ-ಧಾರವಾಡ ಅವಳಿ ನಗರದ ಆರ್ಥಿಕವಾಗಿ ದುರ್ಬಲ ಹಾಗೂ ಹಿಂದುಳಿದ ವರ್ಗದ ನಿವೇಶನ ರಹಿತರಿಗೆ ನಿವೇಶನ ಕಲ್ಪಿಸುವಂತೆ ಆಗ್ರಹಿಸಿ ನಿವೇಶನ ರಹಿತರ ಆಂದೋಲನ ಹು-ಧಾ ಸಂಘಟನೆ ವತಿಯಿಂದ ಸೋಮವಾರ ನಗರದಲ್ಲಿ ಮೌನ ಪ್ರತಿಭಟನೆ ನಡೆಸಲಾಯಿತು.

ನಗರದ ಇಂದಿರಾ ಗ್ಲಾಸ್‌ಹೌಸ್‌ನಿಂದ ಆರಂಭವಾದ ಮೆರವಣಿಗೆ ಹಳೇ ಬಸ್ ನಿಲ್ದಾಣ, ಚೆನ್ನಮ್ಮ ವೃತ್ತದ ಮೂಲಕ ತಹಸೀಲ್ದಾರ್‌ಕಚೇರಿ ತಲುಪಿತು. ಬಳಿಕ ಪ್ರತಿಭಟನಾಕಾರರು ಮನವಿ ಸಲ್ಲಿಸಿ ಸರ್ಕಾರದ ಗಮನ ಸೆಳೆದರು.

ಅವಳಿ ನಗರದ ನಾಲ್ಕು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸುಮಾರು 10ರಿಂದ 15 ಸಾವಿರ ನಿವೇಶನ ರಹಿತ ಕುಟುಂಬಗಳಿವೆ. ವರ್ಷಗಳಿಂದ ನಿವೇಶನಕ್ಕಾಗಿ ಹೋರಾಟ ನಡೆಸುತ್ತಿದ್ದರೂ, ಬಡವರಿಗೆ ಸೂರು ಕಲ್ಪಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಗೃಹ ನಿರ್ಮಾಣ ಮಂಡಳಿಯ ಯೋಜನೆಗಳು ಹಣವಂತರಿಗೆ ಅನುಕೂಲವಾಗುತ್ತಿವೆಯೇ ಹೊರತು ಬಡವರ ಪಾಲಿಗೆ ಮರೀಚಿಕೆಯಾಗಿವೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಿ ಜಾಗದಲ್ಲಿ ಅರ್ಹ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಬೇಕು. ಸರ್ಕಾರಿ ಜಾಗ ಲಭ್ಯವಿಲ್ಲದಿದ್ದರೆ ಖಾಸಗಿ ಭೂಮಿ ಖರೀದಿಸಿ ಬಡವರಿಗೆ ನಿವೇಶನ ಒದಗಿಸಬೇಕು. ನಿವೇಶನ ರಹಿತರ ಸಮಗ್ರ ಸಮೀಕ್ಷೆ ನಡೆಸಿ, ಅರ್ಹರನ್ನು ಗುರುತಿಸಿ ಅಧಿಕೃತ ಗುರುತಿನ ಚೀಟಿ ನೀಡಬೇಕು ಎಂದು ಆಗ್ರಹಿಸಿದರು.

ಬೇಡಿಕೆಗಳನ್ನು ತಕ್ಷಣ ಈಡೇರಿಸದಿದ್ದರೆ ಅವಳಿ ನಗರದ ನಿವೇಶನ ರಹಿತರನ್ನು ಒಗ್ಗೂಡಿಸಿ ಬೃಹತ್ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಬಳಿಕ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಸಂಸದ ಐ.ಜಿ. ಸನದಿ, ಸಂಘಟನೆಯ ಸಂಚಾಲಕ ನಾಗರಾಜ ಗುರಿಕಾರ, ಸಹ ಸಂಚಾಲಕ ರಾಜು ಹಿರೇಒಡೆಯರ, ಕಿರಣಸಿಂಗ್ ರಜಪೂತ, ನಾಗರಾಜ ನಾಡಕರ್ಣಿ, ಗುರುನಾಥ ಉಳ್ಳಿಕಾಶಿ, ರಾಜು ಕಲಾಲ, ಎಸ್. ಆರ್. ರಾಯ್ಕರ, ಬಿಬಿಜಾನ ಮುಲ್ಲಾ, ಮಹಾದೇವಿ ಉಮಚಗಿ, ರೇಣುಕಾ ವಾಲ್ಮೀಕಿ, ಪ್ರಕಾಶ ಮೆಹರವಾಡೆ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ನಿವೇಶನ ಕಲ್ಪಿಸುವಂತೆ ಆಗ್ರಹಿಸಿ ನಿವೇಶನ ರಹಿತರ ಆಂದೋಲನ ಹು-ಧಾ ಸಂಘಟನೆಯಿಂದ ಸೋಮವಾರ ಹುಬ್ಬಳ್ಳಿಯಲ್ಲಿ ಮೌನ ಪ್ರತಿಭಟನೆ ನಡೆಸಲಾಯಿತು.

ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ನೋಂದಾಯಿತ ಕಛೇರಿ :– ರಾಧಿಕಾ, 2ನೇ ಮಹಡಿ, ಲಾ ಗಾರ್ಡನ್ ರಸ್ತೆ, ನವರಂಗಪುರ, ಅಹಮದಾಬಾದ್–09.
ಪ್ರಾದೇಶಿಕ ಕಚೇರಿ: ನೆಲ ಮಹಡಿ, ಜೆನಿತ್ ಹೌಸ್, ರೇಸ್ ಕೋರ್ಸ್ ಎದುರು, ಮಹಾಲಕ್ಷ್ಮಿ, ಮುಂಬೈ– 34. ದೂರವಾಣಿ: 022–39586300, ಫ್ಯಾಕ್ಸ್: 022–39586666. ಶಾಖಾ ಕಚೇರಿ: ಸಂಖ್ಯೆ.195/38, 1ನೇ ಮಹಡಿ ಹೆಚ್‌ಡಿಎಫ್‌ಸಿ ಕಟ್ಟಡ 10ನೇ ಅಡ್ಡ ರಸ್ತೆ, ವಿಲ್ಸನ್ ಗಾರ್ಡನ್ ಬೆಂಗಳೂರು–27.
ವೆಬ್: www.hdbfs.com, ಇಮೇಲ್ ಐಡಿ: compliance@hdfs.com

ಇ–ಹರಾಜು ಮಾರಾಟ ಸೂಚನೆ
(ಸಾಲಗಾರ / ಸಹ–ಅರ್ಜಿದಾರ / ಸಾರ್ವಜನಿಕರಿಗೆ) (ಸರ್ಫೇಸಿ ಕಾಯ್ದೆ, 2002 ರ
ನಿಯಮ 8(6) ರ ಅಡಿಯಲ್ಲಿ ಮತ್ತು ನಿಯಮ 9(1) ರ ಅಡಿಯಲ್ಲಿ)

ಕೆಳಗೆ ಸಹಿ ಮಾಡಲಾದ **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**ನ ಅಧಿಕೃತ ಅಧಿಕಾರಿ, ಕೆಳಗೆ ತಿಳಿಸಲಾದ ಸಾಲ ಖಾತೆಗಾಗಿ, ಸೆಕ್ಯುರಿಟೈಸೇಶನ್ ಮತ್ತು ಹಣಕಾಸು ಆಸ್ತಿಗಳ ಪುನರ್ನಿರ್ಮಾಣ ಮತ್ತು ಭದ್ರತಾ ಬಡ್ಡಿ ಜಾರಿ ಕಾಯ್ದೆ 2002 ರ ಅಡಿಯಲ್ಲಿ ಈ ಕೆಳಗಿನ ಆಸ್ತಿಯ ಸ್ವಾಧೀನವನ್ನು ವಹಿಸಿಕೊಂಡಿದ್ದಾರೆ ಮತ್ತು ಅದನ್ನು **"ಎಲ್ಲಿ ಇದೆಯೋ ಹಾಗೆಯೇ & ಎಲ್ಲಿ ಏನಿದೆಯೋ ಹಾಗೆಯೇ"** ಎಂಬ ಆಧಾರದ ಮೇಲೆ ಮಾರಾಟ ಮಾಡುವ ಹಕ್ಕನ್ನು ಹೊಂದಿದ್ದಾರೆ.

ಅರ್ಜಿದಾರರ ಮತ್ತು ಸಹ–ಅರ್ಜಿದಾರರ ಹೆಸರು ಮತ್ತು ವಿಳಾಸ:– 1. ಹೋಟೆಲ್ ನೂರಿ, ಅಕ್ಕಿಪೇಟೆ, ಧಾರವಾಡ–580001 ಕರ್ನಾಟಕ. **2. ದರೋಗ ಮೆಬೂಬ್ ಅಲಿ (ನಿಧನಹೊಂದಿದ್ದಾರೆ)** ಬಿನ್ ಅಬ್ದುಲ್ ರೆಹಮಾನ್ ದರೋಗ ಓಣಿ ಧಾರವಾಡ, ಎ. **ನಜನೀನ್‌ಬಾನಮ್ ದರೋಗ** ಕೋಂ ಮೊಹಮದ್ ಯೂನುಸ್, ದರೋಗ ಗಲ್ಲಿ ಧಾರವಾಡ, ಧಾರವಾಡ–580001. ಬಿ. ಮೊಹಮ್ಮದಯೂನುಸ್ ದರೋಗ, ಬಿನ್ ಮೆಹಬೂಬ್‌ಅಲಿ, ಹೆಚ್ ನಂ. 1466 ದರೋಗ ಓಣಿ ಧಾರವಾಡ–580001 ಕರ್ನಾಟಕ. **3) ನಜನೀನ್‌ಬಾನಮ್ ದರೋಗ** ಕೋಂ ಮೊಹಮದ್ ಯೂನುಸ್, ದರೋಗ ಗಲ್ಲಿ ಧಾರವಾಡ, ಧಾರವಾಡ–580001, ಕರ್ನಾಟಕ. **4) ಮೊಹಮದ್‌ಯೂನುಸ್ ದರೋಗ** ಬಿನ್ ಮೆಹಬೂಬ್‌ಅಲಿ, ಹೆಚ್ ನಂ. 1466 ದರೋಗ ಓಣಿ ಧಾರವಾಡ–580001 ಕರ್ನಾಟಕ.

ಸಾಲದ ಖಾತೆ ನಂ. 4220016, ಒಟ್ಟಾರೆ ಬಾಕಿ ಮೊತ್ತ : ರೂ. 37,24,392.92/– (ಮೂವತ್ತೇಳು ಲಕ್ಷದ ಇಪ್ಪತ್ನಾಲ್ಕು ಸಾವಿರದ ಮೂರುನೂರಾ ತೊಂಭತ್ತೆರಡು ರೂ ಮತ್ತು ತೊಂಭತ್ತೆರಡು ಪೈ ಮಾತ್ರ) **30.10.2026** ರಂದು ಇದ್ದಂತೆ, ಹೆಚ್ಚಿನ ಬಡ್ಡಿ/ ಆಕಸ್ಮಿಕ ವೆಚ್ಚಗಳು/ ವೆಚ್ಚಗಳೊಂದಿಗೆ ಪೂರ್ಣ ಪಾವತಿಯ ದಿನಾಂಕದವರೆಗೆ.

ಸುರಕ್ಷಿತ ಸಾಲಗಾರರಿಗೆ ತಿಳಿದಿರುವ ಯಾವುದಾದರೂ ಋಣಭಾರಗಳ ವಿವರಗಳು: – ನಿಲ್.

ಸ್ಥಿರಾಸ್ತಿಗಳ ವಿವರಣೆ: ಸೆಲ್ಲರ್ ಮಹಡಿ, ನೆಲಮಹಡಿ ಮತ್ತು ಮೊದಲನೇ ಮಹಡಿ ಬಹುಮಹಡಿ ವಾಣಿಜ್ಯ ಕಟ್ಟಡ ನಿರ್ಮಾಣ ಸಿಟಿಎಸ್ ನಂ. 171/ಎ/ಎ/ಎ/1/ಎಎಫ್ ಮೇಲೆ ನಿರ್ಮಿತ ಅಳತೆ 83.60 ಚದರ ಮೀಟರ್ಸ್, ವಾರ್ಡ್ ನಂ. 12 ಧಾರವಾಡ ತಾಲೂಕು ಮತ್ತು ಧಾರವಾಡ ಉಪ ನೋಂದಣಿ, ಹೆಚ್‌ಡಿಎಂಸಿ ಹುಬ್ಬಳ್ಳಿ ವ್ಯಾಪ್ತಿ, ಮತ್ತು ಚಕ್ಕುಬಂದಿ : ಉತ್ತರ : ಭಗವಂತಪ್ಪ ಬಸವಣ್ಣೆಪ್ಪ ಕೊಲ್ಹಾಪುರ ರವರ ಆಸ್ತಿ, ದಕ್ಷಿಣ : ಕೆಳಗೇರಿ ರವರ ಆಸ್ತಿ, ಪೂರ್ವ : 171/1ಎ/1ಎ/1ಎ/1, ಪಶ್ಚಿಮ : ಕಾರ್ಪೋರೇಷನ್ ರಸ್ತೆ.


ಮೀಸಲು ಬೆಲೆ	ಅರ್ನೆಸ್ಟ್ ಹಣ ಠೇವಣಿ	ಬಿಡ್ ಹೆಚ್ಚಳದ ಮೊತ್ತ	ಹರಾಜಿನ ದಿನಾಂಕ & ಸಮಯ	ಇಎಂಡಿ ಕೊನೆಯ ದಿನಾಂಕ & ಸಮಯ
Rs.2,19,31,500/-	Rs.21,93,150/-	Rs.1,00,000/-	08.12.2026 ಬೆಳಗ್ಗೆ 11 ರಿಂದ ಮಧ್ಯಾಹ್ನ 12 ರವರೆಗೆ ಜೊತೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ	07-12-2026 up to 06:00 p.m

ಟೆಂಡರ್–ಕಮ್–ಹರಾಜು ಮಾರಾಟದ ನಿಯಮಗಳು ಮತ್ತು ಷರತ್ತುಗಳು:

1) ಹರಾಜು ಮಾರಾಟವು "ಆನ್‌ಲೈನ್ ಇ–ಹರಾಜು" ಬಿಡ್ಡಿಂಗ್ ಆಗಿದ್ದು, ವೆಬ್‌ಸೈಟ್ **https://www.bankeauctions.com** ಮೊಬೈಲ್ ಅಪ್ಲಿಕೇಶನ್ ಮೂಲಕ ಮೇಲಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ದಿನಾಂಕಗಳಲ್ಲಿ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ಇರುತ್ತದೆ. **2)** ಆಸಕ್ತ ಬಿಡ್ದರ್‌ಗಳು ತಮ್ಮ ಇಎಂಡಿಯನ್ನು https://www.bankeauctions.com ವೆಬ್ ಪೋರ್ಟಲ್ ಮೂಲಕ (ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು https://www.bankeauctions.com ನಲ್ಲಿ ಹೆಸರನ್ನು ನೋಂದಾಯಿಸುವ ಮೂಲಕ ಉಚಿತವಾಗಿ ಪಡೆಯಬಹುದು) ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಮೂಲಕ ಸಲ್ಲಿಸಬೇಕು. ಮೇಲಿನ **"ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್"** ಹೆಸರಿನಲ್ಲಿ ಪಡೆದ ಮೀಸಲು ಬೆಲೆಯ 10% ರ ಇಎಂಡಿಗೆ ಆರ್ಡರ್/ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಇಎಂಡಿಯನ್ನು ಪಾವತಿಸಬೇಕು. ವೆಬ್ ಪೋರ್ಟಲ್‌ನಲ್ಲಿ ಬಿಡ್ದಾರರು ನೋಂದಾಯಿಸಿಕೊಂಡ ನಂತರ (ಒಂದು ಬಾರಿ), ಉದ್ದೇಶಿತ ಬಿಡ್‌ದಾರರು / ಖರೀದಿದಾರರು ಬಿಡ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯದ ಮೊದಲು ವೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ಕೆಳಗಿನ ದಾಖಲೆಗಳ ಪ್ರತಿಗಳನ್ನು ಪಡೆಯಬೇಕಾಗುತ್ತದೆ. i) NEFT/RTGS ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಪ್ರತಿ; ii) ಪ್ಯಾನ್ ಕಾರ್ಡ್ ಪ್ರತಿ; iii) ಗುರುತಿನ ಪುರಾವೆ/ ವಿಳಾಸ ಪುರಾವೆ (KYC) ಅಂದರೆ ಮತದಾರರ ಗುರುತಿನ ಚೀಟಿ/ ಚಾಲನಾ ಪರವಾನಗಿ/ ಪಾಸ್‌ಪೋರ್ಟ್ ಇತ್ಯಾದಿಗಳ ಸ್ವಯಂ–ದೃಢೀಕೃತ ಪ್ರತಿ; ಇದು ಇಲ್ಲದೆ ಬಿಡ್ ತಿರಸ್ಕರಿಸಲ್ಪಡುತ್ತದೆ. ಅನುಬಂಧ–II ಮತ್ತು III ರ ಸ್ಕ್ಯಾನ್ ಮಾಡಿದ ಪ್ರತಿಯನ್ನು ಅಪ್‌ಲೋಡ್ ಮಾಡುವುದು (ವೆಬ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು: https//www.bankeauctions.com ಸರಿಯಾಗಿ ಭರ್ತಿ ಮಾಡಿ ಸಹಿ ಮಾಡಿದ ನಂತರ ಸಹ ಅಗತ್ಯವಾಗಿರುತ್ತದೆ. ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ರಚಿಸಲು, ಡೇಟಾವನ್ನು ಅಪ್‌ಲೋಡ್ ಮಾಡಲು, ಬಿಡ್ ದಾಖಲೆಗಳನ್ನು ಸಲ್ಲಿಸಲು, ಆನ್‌ಲೈನ್ ಇಂಟರ್–ಸೆ ಬಿಡ್ಡಿಂಗ್‌ನಲ್ಲಿ ತರಬೇತಿ/ಪ್ರದರ್ಶನ ಇತ್ಯಾದಿಗಳಲ್ಲಿ ಸಹಾಯದ ಅಗತ್ಯವಿರುವ ಆಸಕ್ತ ಬಿಡ್ದರ್‌ಗಳು **ಮೆ॥ ಸಿ1 ಇಂಡಿಯಾ ಪ್ರೈ ಲಿ., ಉದ್ಯೋಗ್ ವಿಹಾರ್, ಫೇಸ್ 2, ಗಲ್ಫ್ ಪೆಟ್ರೋಕೆಮ್ ಕಟ್ಟಡ, ಕಟ್ಟಡ ಸಂಖ್ಯೆ 301, ಗುರುಗಾಂವ್, ಹರಿಯಾಣ. ಪಿನ್: 122015, ಮೇಲ್ ಐಡಿ: support@bankeauctions.com, ಬೆಂಬಲ ಸಹಾಯವಾಣಿ ಸಂಖ್ಯೆಗಳು: 124–4302020/21/22/23, 7291981124 /1125/1126, ಮಾರಾಟ ವಿಚಾರಣೆಗಳು: sales@bankeauctions.com, 3)** ಬಿಡ್‌ದಾರರು ಹರಾಜಿನಲ್ಲಿ ಖುದ್ದಾಗಿ ಹಾಜರಿರಬೇಕು ಮತ್ತು ವೈಯಕ್ತಿಕವಾಗಿ ಭಾಗವಹಿಸಬೇಕು ಮತ್ತು ಅವರು ಸ್ವತಃ ಬಿಡ್ ಮಾಡುತ್ತಿದ್ದಾರೆ ಎಂದು ಲಿಖಿತ ಘೋಷಣೆಯನ್ನು ನೀಡಬೇಕು. ಯಾವುದೇ ಅಧಿಕೃತ ವ್ಯಕ್ತಿಗೆ ಅವಕಾಶವಿಲ್ಲ. **4)** ಇಚ್ಛಿಸುವ ಬಿಡ್ದರ್‌ಗಳು ಟೆಂಡರ್ ಫಾರ್ಮ್‌ಗಳನ್ನು ಮ್ಯಾನೇಜರ್, **ಮೆ॥ ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್. ನಂ.195/38, 1 ನೇ ಮಹಡಿ ಹೆಚ್‌ಡಿಎಫ್‌ಸಿ ಕಟ್ಟಡ 10 ನೇ ಅಡ್ಡ ರಸ್ತೆ, ವಿಲ್ಸನ್ ಗಾರ್ಡನ್ ಬೆಂಗಳೂರು–27** ಅವರಿಂದ ಪಡೆಯಬಹುದು. ಉದ್ದೇಶಿತ ಬಿಡ್ದರ್‌ಗಳು ತಮ್ಮ ಬಿಡ್‌ಗಳನ್ನು ಅಧಿಕೃತ ಅಧಿಕಾರಿ, **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**ಗೆ ವಿಳಾಸ ನೀಡಿರುವ ಮೊಹರು ಮಾಡಿದ ಲಕೋಟೆಗಳಲ್ಲಿ ಸೂಚಿಸಲಾದ ಟೆಂಡರ್ ನಮೂನೆಯಲ್ಲಿ ಮಾತ್ರ ಸಲ್ಲಿಸಬೇಕು, ಜೊತೆಗೆ ಮೀಸಲು ಬೆಲೆಯ 10% ಇಎಂಡಿಗಾಗಿ ಪೇ ಆರ್ಡರ್/ಡಿಮಾಂಡ್ ಡ್ರಾಫ್ಟ್ ಅನ್ನು "ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್" ಹೆಸರಿನಲ್ಲಿ ಡ್ರಾ ಮಾಡಲಾಗಿದೆ ಮತ್ತು ಈ ಮೂಲಕ ತಿಳಿಸಲಾದ ಟೆಂಡರ್–ಕಮ್–ಹರಾಜು ಮಾರಾಟದ **ದಿನಾಂಕ 07.12.2026 ರಂದು ಸಂಜೆ 6** ಗಂಟೆಯೊಳಗೆ ಸಲ್ಲಿಸಬೇಕು. **5)** ಆಸ್ತಿ ಮತ್ತು ಇತರ ವಿವರಗಳ ಪರಿಶೀಲನೆಗಾಗಿ, ಖರೀದಿದಾರರನ್ನು ಸಂಪರ್ಕಿಸಬಹುದು: **ಮೆ॥ ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್. ನಂ.195/38, 1 ನೇ ಮಹಡಿ ಹೆಚ್‌ಡಿಎಫ್‌ಸಿ ಕಟ್ಟಡ 10 ನೇ ಅಡ್ಡ ರಸ್ತೆ, ವಿಲ್ಸನ್ ಗಾರ್ಡನ್ ಬೆಂಗಳೂರು–27, ವ್ಯವಸ್ಥಾಪಕಿ – ಶ್ರೀಮತಿ ರಾಗಿಣಿ. ಎಂ. ಕೆ.– 9110609817 ಮತ್ತು ಶ್ರೀ ಅನಿಲ್ ಶ್ರೀನಿವಾಸ – 8618401882. ಆಸ್ತಿಯನ್ನು "ಎಲ್ಲಿದೆಯೋ ಹಾಗೆಯೇ" ಮತ್ತು "ಎಲ್ಲಿ ಏನಿದೆಯೋ ಹಾಗೆಯೇ" ಸ್ಥಿತಿಯ ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. 6)** ಮೊಹರು ಮಾಡಿದ ಟೆಂಡರ್‌ಗಳನ್ನು ಇಲ್ಲಿ ತಿಳಿಸಲಾದ **ದಿನಾಂಕ 08.12.2026 ರಂದು ಬೆಳಿಗ್ಗೆ 11** ಗಂಟೆಯೊಳಗೆ ಉದ್ದೇಶಿತ ಬಿಡ್ದರ್‌ಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಸಾಮಾನ್ಯವಾಗಿ ಕ್ಲೋಸ್ಡ್ ಟೆಂಡರ್‌ಗಳ ಮೂಲಕವೂ ಇದೇ ರೀತಿ ನಡೆಯುತ್ತಿದ್ದರೂ, ಅಧಿಕೃತ ಅಧಿಕಾರಿಯು ತಮ್ಮ ಸ್ವಂತ ವಿವೇಚನೆಯಿಂದ, ಕ್ಲೋಸ್ಡ್ ಟೆಂಡರ್ ಪ್ರಕ್ರಿಯೆಯಲ್ಲಿ ಸ್ವೀಕರಿಸಿದ ಬಿಡ್‌ಗಿಂತ ಹೆಚ್ಚಿನ ಬಿಡ್ ಅನ್ನು ಉಲ್ಲೇಖಿಸಲು ಬಯಸುವ ಆಸಕ್ತ ಬಿಡ್ದರ್‌ಗಳಲ್ಲಿ ಹರಾಜನ್ನು ನಡೆಸಬಹುದು ಮತ್ತು ಅಂತಹ ಸಂದರ್ಭದಲ್ಲಿ, ಹೆಚ್ಚಿನ ಬಿಡ್ ಮಾಡುವ ವ್ಯಕ್ತಿಗೆ ಮಾರಾಟವನ್ನು ನೀಡಲಾಗುತ್ತದೆ. ಆದಾಗ್ಯೂ, ಮಾರಾಟವು **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**ನ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. **7)** ಯಶಸ್ವಿ ಬಿಡ್ದಾರರು ಮಾರಾಟದ ಮೊತ್ತದ 25% (ಪಾವತಿಸಿದ ಇಎಂಡಿ ಸೇರಿದಂತೆ) ಅನ್ನು ಮಾರಾಟ ಪೂರ್ಣಗೊಂಡ ಅದೇ ದಿನ ಅಥವಾ ಮುಂದಿನ ಕೆಲಸದ ದಿನದ ನಂತರ ಪಾವತಿಸಬೇಕು ಮತ್ತು ಉಳಿದ 75% ಮೊತ್ತವನ್ನು ಮಾರಾಟ ದೃಢೀಕರಣ ದಿನಾಂಕದಿಂದ 15 ದಿನಗಳ ಒಳಗೆ ಪಾವತಿಸಬೇಕು, ಇಲ್ಲದಿದ್ದರೆ 25% ನ ಆರಂಭಿಕ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಯಾವುದೇ ಕಾರಣಕ್ಕೂ ಅದನ್ನು ಮರುಪಾವತಿಸಲಾಗುವುದಿಲ್ಲ. ಯಶಸ್ವಿ ಬಿಡ್ದಾರರು ಮೇಲೆ ತಿಳಿಸಿದಂತೆ ಸಂಪೂರ್ಣ ಬಿಡ್ ಮೊತ್ತದ 25% ಅನ್ನು ಪಾವತಿಸಲು ವಿಫಲವಾದರೆ, ಮುಂದಿನ ಯಶಸ್ವಿ ಬಿಡ್ದಾರರನ್ನು ಪರಿಗಣಿಸಲಾಗುತ್ತದೆ ಮತ್ತು ಮಾರಾಟವನ್ನು ಪೂರ್ಣಗೊಳಿಸಲು ಅರ್ಹರಾಗಿರುತ್ತಾರೆ. **8)** ಇಲ್ಲಿ ನಿಗದಿಪಡಿಸಿದ ಸಮಯದ ಮಿತಿಯೊಳಗೆ ಸಂಪೂರ್ಣ ಮಾರಾಟದ ಪರಿಗಣನೆಯನ್ನು ಸ್ವೀಕರಿಸಿದ ನಂತರವೇ ಅಧಿಕೃತ ಅಧಿಕಾರಿಯು ಯಶಸ್ವಿ ಖರೀದಿದಾರರ ಪರವಾಗಿ ಮಾರಾಟ ಪ್ರಮಾಣಪತ್ರವನ್ನು ನೀಡುತ್ತಾರೆ. **9)** ಯಶಸ್ವಿ ಖರೀದಿದಾರರು ಕಾನೂನಿನಡಿಯಲ್ಲಿ ಅನ್ವಯವಾಗುವ ಸ್ಟ್ಯಾಂಪ್ ಡ್ಯೂಟಿ, ನೋಂದಣಿ ಶುಲ್ಕ ಇತ್ಯಾದಿ ಸಾಗಣೆಗೆ ಪಾವತಿಸಬೇಕಾದ ಶುಲ್ಕಗಳು/ಶುಲ್ಕಗಳನ್ನು ಭರಿಸುತ್ತಾರೆ. **10)** ಯಶಸ್ವಿ ಬಿಡ್ದಾರರು ಸರ್ಕಾರ, ಸರ್ಕಾರಿ ಉದ್ಯಮ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಪಾವತಿಸಬೇಕಾದ ಶಾಸನಬದ್ಧ ಬಾಕಿಗಳು (ಕಾನೂನುಬದ್ಧ ಮನೆ ತೆರಿಗೆ, ವಿದ್ಯುತ್ ಶುಲ್ಕಗಳು ಮತ್ತು ಇತರ ಬಾಕಿಗಳು), ಟಿಡಿಎಸ್, ಜಿಎಸ್ಟಿ ಯಾವುದಾದರೂ ಇದ್ದರೆ ಅವುಗಳನ್ನು ಪಾವತಿಸಬೇಕು. **11)** ಅಧಿಕೃತ ಅಧಿಕಾರಿಯು ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಾಗೂ ಯಾವುದೇ ಕಾರಣವನ್ನು ನೀಡದೆ ಹರಾಜನ್ನು ಮುಂದೂಡುವ/ಮುಂದೂಡುವ/ರದ್ದುಗೊಳಿಸುವ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ. ಯಾವುದೇ ಕಾರಣವನ್ನು ನೀಡದೆ ಮಾರಾಟದ ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ಮಾರ್ಪಡಿಸಬಹುದು. ಅಲ್ಲದೆ, ಯಾವುದೇ ಪೂರ್ವ ಸೂಚನೆ ಇಲ್ಲದೆ ಮಾರಾಟದ ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ಮಾರ್ಪಡಿಸುವ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ.

ದಿನಾಂಕ : 30.10.2026, ಸ್ಥಳ : ಬೆಂಗಳೂರು, ಸಹಿ/– ಅಧಿಕೃತ ಅಧಿಕಾರಿ, ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸ್ ಲಿಮಿಟೆಡ್ ಪರವಾಗಿ

ಜನರ ಸಮಸ್ಯೆ ಪರಿಹಾರಕ್ಕೆ ಪ್ರಜಾಸೇವಾ ಕಾರ್ಯಕ್ರಮ



ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸೌಲಭ್ಯದ ಚೆಕ್ ವಿತರಿಸಲಾಯಿತು.

● **ಕನ್ನಡಪ್ರಭ ವಾರ್ತೆ** ಧಾರವಾಡ

ಪ್ರಜಾಸೇವಾ ಕಾರ್ಯಕ್ರಮಗಳ ಮೂಲಕ ಜಿಲ್ಲಾಡಳಿತದ ಎಲ್ಲ ಇಲಾಖೆಗಳ ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನಕ್ಕೆ ಕರೆತಂದು, ಜನರ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ತಾಲೂಕಿನ ಮನಸೂರು, ಮನಗುಂಡಿ, ಮುಮ್ಮಿಗಟ್ಟಿ ಗ್ರಾಮಗಳಲ್ಲಿ ಪ್ರಜಾಸೇವಾ ಆಂದೋಲನ ಸಭೆ ಜರುಗಿಸಿ, ಮಾತನಾಡಿದ ಅವರು, ಗ್ರಾಮದ ಅಭಿವೃದ್ಧಿ ಹಾಗೂ ಜನರ ಕಷ್ಟಗಳ ನಿವಾರಣೆಗಾಗಿ ಯಾವುದೇ ರಾಜಕೀಯ ಪಕ್ಷದ ಭೇದ-ಭಾವವಿಲ್ಲದೆ ಎಲ್ಲ ಸಮಾಜದ ಮುಖಂಡರು ಪಕ್ಷಾತೀತವಾಗಿ ಒಂದಾಗಿ ಬರಬೇಕು. ರಾಜಕೀಯ ಪಕ್ಷಗಳು ಯುವ ಪೀಳಿಗೆಗೆ ಸಮಾನತೆ ಪ್ರೀತಿ, ಕೋಮು ಸೌಹಾರ್ದತೆ ಕೊಡುಗೆ ನೀಡಬೇಕು ಎಂದರು.

ಪ್ರತಿಯೊಂದು ಹಳ್ಳಿಯಲ್ಲೂ ಸಾರ್ವಜನಿಕರ, ಅಧಿಕಾರಿಗಳ ಸಮ್ಮುಖದಲ್ಲಿ ಬಸ್ ವ್ಯವಸ್ಥೆ, ರಸ್ತೆ ದುರಸ್ತಿ, ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಮದ್ಯ ಮಾರಾಟ ಬಂದ್ ಮಾಡುವುದು ಸೇರಿದಂತೆ ವಿವಿಧ ಸಮಸ್ಯೆ ಆಲಿಸಿದ ಸಚಿವರು, ಸಮಸ್ಯೆಗಳಿಗೆ ತಕ್ಷಣವೇ ಪರಿಹಾರ ಒದಗಿಸಿದರು. ಕೆಲವು ಸಮಸ್ಯೆಗಳನ್ನು ಅಧಿಕಾರಿಗಳಿಗೆ ವೀಕ್ಷಿಸಿ, ಪರಿಶೀಲಿಸಿ ಬಗೆಹರಿಸುವಂತೆ ಸೂಚಿಸಿದರು.

ಮನಸೂರು ಗ್ರಾಮದಲ್ಲಿ ಬರಗಾಲದ ನಿಮಿತ್ತ ರೈತರಿಗೆ ಮೇವು ಬೀಜ ವಿತರಣೆ ಹಾಗೂ ಮನಸೂರು, ಮನಗುಂಡಿ ಗ್ರಾಮದಲ್ಲಿ 10 ಮಕ್ಕಳಿಗೆ ಸುಕನ್ಯಾ ಸಮೃದ್ಧಿ ಯೋಜನೆಯ ಪಾಸ್‌ಬುಕ್ ವಿತರಿಸಲಾಯಿತು. ಮನಸೂರು–ಮನಗುಂಡಿ–ಬೆಳ್ಳಿಗಟ್ಟಿ ರಸ್ತೆ ಅಭಿವೃದ್ಧಿ ಹಾಗೂ ಮನಸೂರು ಗ್ರಾಮದ ವ್ಯಾಪ್ತಿಯಲ್ಲಿ ಫುಟ್‌ಪಾತ್ ನಿರ್ಮಾಣ ಕಾಮಗಾರಿಗೆ ಲಾಡ್ ಭೂಮಿಪೂಜೆ ನೆರವೇರಿಸಿದರು.

ಮುಮ್ಮಿಗಟ್ಟಿ ಗ್ರಾಮದಲ್ಲಿ 12 ಎಮ್ಮೆ ಮತ್ತು ಹಸುಗಳ ಪ್ರಾಣ ಹಾನಿ ಆಗಿರುವುದರಿಂದ ರೈತರಿಗೆ ₹ 1.80 ಲಕ್ಷ ಚೆಕ್‌ನ್ನು ಸಚಿವರು ವಿತರಿಸಿದರು. ಕಾರ್ಮಿಕರ ಇಲಾಖೆ ವತಿಯಿಂದ ಕಾರ್ಮಿಕರ ಮಕ್ಕಳ ವಿವಾಹಕ್ಕಾಗಿ ಪೋಷಕರಿಗೆ ₹ 60 ಸಾವಿರ ಸಹಾಯಧನದ ಎರಡು ಚೆಕ್ ವಿತರಿಸಿದರು. ವಿಕಾಸನಗರ, ಉಪಗ್ರಾಮದ ಭೂ ಗ್ಯಾರಂಟಿಯ ಹಕ್ಕುಪತ್ರ ಫಲಾನುಭವಿಗಳಿಗೆ ಸಚಿವರು ವಿತರಿಸಿದರು. ಕಾರ್ಯಕ್ರಮದಲ್ಲಿ ಜಿಪಂ ಸಿಇಒ ಭುವನೇಶ ಪಾಟೀಲ, ಧಾರವಾಡ ತಹಸೀಲ್ದಾರ್ ಡಾ. ಡಿ.ಎಚ್. ಹೂಗಾರ, ತಾಪಂ ಇಒ ಗಂಗಾಧರ ಕಂದಕೂರ, ಮನಸೂರು ಗ್ರಾಪಂ ಪಿಡಿಒ ಬಿ.ಡಿ. ಹಿರೇಮಠ ಸೇರಿದಂತೆ ಅಧಿಕಾರಿಗಳು ಇದ್ದರು.

ರೈತರಿಗೂ ನ್ಯಾಯವಿಲ್ಲ, ಗ್ರಾಹಕರಿಗೂ ನೆಮ್ಮದಿ ಇಲ್ಲ: ಪಾಟೀಲ

ಹುಬ್ಬಳ್ಳಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ರೈತರು ಮತ್ತು ಸಾಮಾನ್ಯ ಗ್ರಾಹಕರು ಇಬ್ಬರೂ ಸಂಕಷ್ಟಕ್ಕೆ ಸಿಲುಕಿದ್ದಾರೆ. ಒಂದೆಡೆ ಕಬ್ಬು ಬೆಳೆಗಾರರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಬೀದಿಗಿಳಿದು ಹೋರಾಟ ನಡೆಸುತ್ತಿದ್ದರೆ, ಮತ್ತೊಂದೆಡೆ ನಂದಿನಿ ಹಾಲಿನ ದರ ಏರಿಕೆಯ ನಿರ್ಧಾರದಿಂದ ಜನಸಾಮಾನ್ಯರ ಕುಟುಂಬದ ಬಜೆಟ್ ಮೇಲೆ ಹೆಚ್ಚುವರಿ ಹೊರೆಗೆ ಕಾರಣವಾಗಿದೆ ಎಂದು ವಿಧಾನ ಪರಿಷತ್ ಸದಸ್ಯರು ಲಿಂಗರಾಜ ಪಾಟೀಲ ಸರ್ಕಾರದ ವಿರುದ್ಧ ಟೀಕಿಸಿದ್ದಾರೆ. ಕಬ್ಬು ಬೆಳೆಗಾರರು ಹಗಲಿರುಳು ಶ್ರಮಿಸಿ ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ದೊರಕಬೇಕು ಎಂದು ಆಗ್ರಹಿಸುತ್ತಿದ್ದಾರೆ. ಆದರೆ, ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾದ ಸರ್ಕಾರವು ಮಾತುಕತೆ, ಭರವಸೆ ಮತ್ತು ವಿಳಂಬದ ಮೂಲಕ ಕಾಲಹರಣ ಮಾಡುತ್ತಿದೆ. ರೈತರ ಸಂಕಷ್ಟವನ್ನು ರಾಜಕೀಯ ದೃಷ್ಟಿಯಿಂದ ನೋಡುವುದನ್ನು ಬಿಟ್ಟು, ಅವರ ಬೆವರಿನ ಶ್ರಮಕ್ಕೆ ತಕ್ಕ ಪ್ರತಿಫಲ ನೀಡಬೇಕು ಎಂದರು.